ಡಿಸೈಡ್ ಮಾಡಿದೀವಿ. ಅದೂನು ಈ ವಾರದೊಳುಕೆ ಆಗ್ಬೇಕು' ಎಂದು ನುಡಿದು ಶಾರದಮ್ಮನ ಕಡೆಗೇ ನೋಡತೊಡಗಿದ. ಅಲ್ಲೆ ಇದ್ದ ಕೆಂಪಿರೆಡ್ಡಿ 'ಎಂಕೂ ಈ ನೆಪದಾಕಾದ್ರು ನಿನ್ ಮನಿ ರೆಡಿಯಾಗುತ್ತೆ ಶಾರದಕ್ಕ' ಎಂದು ಸೇರಿಸಿದ.

ಶಾರದಮ್ಮ ಎಲ್ಲವನ್ನೂ ಕೇಳಿಸಿಕೊಂಡು ಸ್ವಲ್ಪ ಹೊತ್ತು ಸುಮ್ಮನಿದ್ದಳು. ಒಂದು ಕ್ಷಣ ಅವಳಿಗೆ ಹೀಗಾದರೂ ತನ್ನ ಮನೆ ಹೊಸರೂಪ ಪಡೆದುಕೊಳ್ಳುತ್ತದಲ್ಲ ಎಂದು ಅನಿಸಿದ್ದುಂಟು. ನಂತರ ಮತ್ತೆಂದಾದರೂ ಮಳೆ ಬಂದರೆ ಮತ್ತದೇ ಕತೆಯಲ್ಲವೆ ಎಂದೂ ಅನಿಸತೊಡಗಿತು. ಎಲ್ಲವೂ ತೇಪೆ ಕೆಲಸಗಳಾಗಿ ಕಾಣತೊಡಗಿದವು. ಒಂದು ವೇಳೆ ಈಗ ಮನೆಯನ್ನು ದುರಸ್ತಿ ಮಾಡಿದರೂ ಅವರ ತುರ್ತಿಗಾಗಿ ಮಾಡುತ್ತಿರುವ ಕೆಲಸವೇ ಹೊರತು ತನ್ನ ತುರ್ತಿಗಾಗಿ ಸ್ಪಂದಿಸುತ್ತಿರುವುದಲ್ಲವಲ್ಲ ಎಂಬ ಭಾವದಲ್ಲಿ ಕುಗ್ಗತೊಡಗಿದಳು. ತನ್ನ ಎದುರಿಗೆ ನಿಂತ ಎಲ್ಲರ ಮುಖಗಳ ಕಡೆಗೂ ದೃಷ್ಟಿ ಹಾಯಿಸತೊಡಗಿದಳು. ಶ್ರೀರಾಮರೆಡ್ಡಿ, ಕೆಂಪಿರೆಡ್ಡಿ, ನಾಗರಾಜ, ತಿಮ್ಮೆಗೌಡ, ರಾಜಾರೆಡ್ಡಿ, ಮೇಷ್ಟ್ರು ಮಹೇಶ... ಎಲ್ಲವೂ ಗಂಡು ಮುಖಗಳೆ. ಅಂಗಲಾಚುವ ಮುಖಗಳೆ. ಸ್ವಲ್ಪ ತನ್ನ ಮನೆಯ ಗೋಡೆಗೆ ಒರಗಿನಿಂತಳು. ಯಾರೋ ಆಸರೆಗೆ ನಿಂತಂತಾಗಿ ಗಟ್ಟಿಗೊಳ್ಳತೊಡಗಿದಳು. ಹಾಗೂ 'ನಿಮಕ್ಯಾರ್ರೂ ನನ್ ಮನೀನ ಮುಟ್ಟಾಕೂ ವದಲಲ್ಲ. ಮತ್ತ ಆಯಪ್ನ ನನ್ ಮನಿ ಮುಂದ್ಕ ಅದೆಂಗ್ ವೋಗ್ತಾನೋ ನೋಡೆ ಬಿಡ್ತೀನಿ. ಅಡ್ಡ ಹಾಕಿ ನನ ಮನಿ ತೋರ್ಸಿ ನ್ಯಾಯ ಕೇಳ್ತೀನಿ. ಅದೇನಾಗ್ತೈತೊ ಆಗ್ಬಿಡ್ಲಿ' ಎಂದು ಕೆರಳಿದಳು.

ಮಹೇಶ, ನಾಗರಾಜ, ತಿಮ್ಮೇಗೌಡ ಎಲ್ಲರೂ

